ಅಸಲು ದಾವಾ ನಂ. 272 /2022
ಪಿ ಡಬ್ಲ್ಯು-1

ದಿನಾಂಕಃ 20.06.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಂದು ವರೆದ ಪಾಟೀಸವಾಲುಃ- ಪ್ರತಿವಾದಿ ಪರ ಶ್ರೀ** ಎಸ್ ಜಿ ಹೆಚ್ **ವಕೀಲರಿಂದ.**

ದಾವಾ ಆಸ್ತಿಯ ಒಟ್ಟು ಕ್ಷೇತ್ರ 8 ಎಕರೆ 10 ಗುಂಟೆ ಇರುತ್ತದೆ . ಅದೇ ರೀತಿ ಮನೆ ಆಸ್ತಿಗಳನ್ನು ಸಹ ದಾವಾ ಆಸ್ತಿ ಎಂದುರ ತೋರಿಸಿರುತ್ತೇನೆ. ದಾವಾ ಜಮೀನು ಆಸ್ತಿಯ ಬಗ್ಗೆ ಈ ಹಿಂದೆ ಎನು ವ್ಯವಹರಣಗಳು ಆಗಿರುತ್ತವೆ ಎಂದು ಗೊತ್ತಿಲ್ಲ. ಸರ್ವೆ ನಂ.32 ರ ಒಟ್ಟು ಕ್ಷೇತ್ರ ಎಷ್ಟು ಎಂದು ಹೇಳಲು ಬರುವುದಿಲ್ಲ. ಸದರಿ ಆಸ್ತಿಯ ಬಗ್ಗೆ ವಿಭಾಗ ಆಗಿಲ್ಲ. ದಿನಾಂಕ 25.05.1929 ರಂದು ದಾ್ಯಮಪ್ಪ ಮಾದರ ತೀರಕಪ್ಪ ಮಾದರ ಇವರ ನಡುವೆ ಸರ್ವೆ ನಂ.32 ರಲ್ಲಿ ಅಪಸಾತ ವಾಟ್ನಿ ಆಗಿ ಸದರಿ ಸರ್ವೆ ನಂ.ಬರ 3 ವಿಭಾಗಳಾಗಿತ್ತು ಎಂದರೆ ಸರಿಯಲ್ಲ. ಸವೆನಂ.32 ರಲ್ಲಿ ಪಶ್ಚಿಮ ಭಾಗದ 6 ಎಕರೆ 3 ಗುಂಟೆ ಪೂರ್ವ ಭಾಗದ 6 ಎಕರೆ 3 ಗುಂಟೆ ಜಮೀನು ದಾ್ಯಮಪ್ಪ ಮತ್ತು ತಿರಕಪ್ಪ ಇವರಿಗೆ ಸಮನಾಗಿ ಹಂಚಿಕೆಯಾಗಿತ್ತು ಎಂದರೆ ಸರಿಯಲ್ಲ. ಅದೇ ರೀತಿ ಮಧ್ಯ ಭಾಗದ 6 ಎಕರೆ 4 ಗುಂಟೆ ದ್ಯಾಮಪ್ಪ ಮತ್ತು ತಿರಕಪ್ಪ ಇವರ ಸಾಮೂಹಿಕ ಹಿಸ್ಸೆಗೆ ನೀಡಲಾಗಿತ್ತು ಎಂದರೆ ಸರಿಯಲ್ಲ. ಆ ಪ್ರಕಾರ ದಿನಾಂಕ 25.05.1929 ರಂದು ಡ.ನಂ.282 ಮಂಜೂರು ಆಗಿರುತ್ತದೆ ಎಂದರೆ ಸರಿಯಲ್ಲ. 6 ಎಕರೆ 3 ಗುಂಟೆ ಜಮೀನನ್ನು ದಿನಾಂಕ 27.06.1931 ರಂದು ತಿರಕಪ್ಪ ಮತ್ತು ಆತನ ಸಹೋದರಿ ನೀಲವ್ವ ಇವರು ದುರ್ಗವ್ವ ಕರಿಯಲ್ಲಪ್ಪ ಹಣಮಣ್ಣನವರ ಇವರಿಗೆ ರೂ.250/- ಕ್ಕೆ ನೊಂದಾಯಿತ ಖರೀದಿ ಪತ್ರ ದ ಮೂಲಕ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆ ಪ್ರಕಾರ ದಿನಾಂಕ 25.08.1931 ರಂದು ಡ.ನಂ.315 ಮಂಜೂರು ಆಗಿರುತ್ತದೆ ಎಂದರೆ ಸರಿಯಲ್ಲ. 6 ಎಕರೆ 3 ಗುಂಟೆ ಜಮೀನನ್ನು ದಿನಾಂಕ 28.12.1932 ರಂದು ದ್ಯಾಮಪ್ಪ ಹಾಗೂ ಆತನ ಸಹೋದರ ಮಾಯಪ್ಪ ಇವರು ಹುಸೇನಪ್ಪ ತಂದೆ ನಿಂಗಪ್ಪ ಕಕ್ಕಯ್ಯಾಡೋರ ಇವರಿಗೆ ರೂ.400/- ಕ್ಕೆ ನೊಂದಾಯಿತ ಖರೀದಿ ಪತ್ರ ದ ಮೂಲಕ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆ ಪ್ರಕಾರ ದಿನಾಂಕ 1933 ರಲ್ಲಿ ಡ.ನಂ.335 ಮಂಜೂರು ಆಗಿರುತ್ತದೆ ಎಂದರೆ ಸರಿಯಲ್ಲ. ಅದೇ ರೀತಿ ದ್ಯಾಮಪ್ಪ ಮತ್ತು ತೀರಕಪ್ಪ ಇವರ ಹಿಸ್ಸಗೆ ನೀಡಿದ 6 ಎಕರೆ 4 ಗುಂಟೆ ಜಮೀನು ಸನ್ 1932 ರಲ್ಲಿ ಮೊಜನಿಯಾಗಿ ಹಿಸ್ಸಾದಲ್ಲಿ ಮತ್ತು ಆಕಾರದಲ್ಲಿ ಬದಲಾವಣೆ ಯಾಗಿ ಅದು 8 ಎಕರೆ 10

ಗುಂಟೆ ಆಗಿರುತ್ತದೆ ಎಂದರೆ ಸರಿಯಲ್ಲ. ಈ ಕುರಿತು ಡ.ದ.322 ಮಂಜೂರು ಆಗಿರುತ್ತದೆ ಎಂದರೆ ಸರಿಯಲ್ಲ. ನಂತರದಲ್ಲಿ ದ್ಯಾಮಪ್ಪ ಮತ್ತು ತೀರಕಪ್ಪ 1973 ರಲ್ಲಿ 8 ಎಕರೆ 10 ಗುಂಟೆ ಜಮೀನಿನಲ್ಲಿ ಅಪಸಾತಿಯ ಮೂಲಕ ಪಾಲು ಮಾಡಿಕೊಂಡಿದ್ದು ಪಶ್ಚಿಮ ಭಾಗದ ಜಮೀನು 4 ಎಕರೆ 5 ಗುಂಟೆ ದ್ಯಾಮಪ್ಪ ಬಿನ್ ಫಕ್ಕಿರಪ್ಪ ಮಾದರ 4 ಅನೇ ಹಿಸ್ಸೆಸ ಹಾಗೂ ದುರ್ಗಪ್ಪ ಮಾಯಪ್ಪ ಮಾದರ, ಕರಿಯಪ್ಪ ಮಾಯಪ್ಪ ಮಾದರ ಇವರಿಗೆ 4 ಅನೆ ಹಿಸ್ಸೆ ಬಂದಿರುತ್ತದೆ ಎಂದರೆ ಸರಿಯಲ್ಲ. ಆಗ ಸರ್ವೆ ನಂ32/ಅ ಎಂದು ಬದಲಾವಣೆ ಆಗಿರುತ್ತದೇ ಎಂದರೆ ಸರಿಯಲ್ಲ. ಸರ್ವೆ ನಂ.32/3 ಬ ಪೂರ್ವ ಭಾಗದ 4 ಎಕರೆ 5 ಗುಂಟೆ ತಿರಕಪ್ಪ ಮತ್ತು ಆತನ ಸಹೋದರಿಯ ಮಗಳು ದುರ್ಗವ್ವ ಇವಳಿಗೆ 8 ಅನೆ ಪಾಲು ಬಂದಿರುತ್ತದೆ ಎಂದರೆ ಸರಿಯಲ್ಲ. ಆ ಪ್ರಕಾರ ವಿಭಾಗ ಮಾಡಿಕೊಂಡು ಸ್ವಾಧಿನದಲ್ಲಿ ಇರುತ್ತವೆ ಎಂದರೆ ಸರಿಯಲ್ಲ. ಸರ್ವೆ ನಂ.32/3 ಅ ಇದನ್ನು ಪ್ರತಿವಾದಿಯರು ಮತ್ತು ಸರ್ವೆ ನಂ.32/3 ಬ ಇದನ್ನು ನಾವುಗಳು ವಹಿವಾಟು ಮಾಡುತ್ತಿರುತ್ತೇವೆ ಎಂದರೆ ಸರಿಯಲ್ಲ. ಎಲ್ಲ ಕ್ಷೇತ್ರವನ್ನು ನಾನೆ ಸಾಗುವಳಿ ಮಾಡುತ್ತಿರುತ್ತೇನೆ. ಸರ್ವೆ ನಂ.32/3 ಬ ರಲ್ಲಿಯ 4 ಅನೆ ಹಿಸ್ಸೆದ ಮಾಲಿಕ ತೀರಕಪ್ಪ ದಿನಾಂಕ 13.02.1976 ರಂದು ತೀರಿಕೊಂಡ ನಂತರ ನಾನು ವಾರ್ಸಾ ನಾತೆಯಿಂದ ಡ ನಂ.1654 ನೇದ್ದನ್ನು ದಿನಾಂಕ 05.08.1977 ರಂದು ಮಂಜೂರು ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿ ಸರ್ವೆ ನಂ32/3 ಅ ರಲ್ಲಿಯ 4 ಅನೆ ಹಿಸ್ಸೆದಾರರಾದ ದ್ಯಾಮಪ್ಪ ದಿನಾಂಕ 12.01.1976 ರಂದು ತೀರಿಕೊಂಡ ನಂತರ ಅವರಿಗೆ ಯಾವುದೇ ಸಂತತಿ ಇಲ್ಲದೆ ಇದ್ದರಿಂದ ಆತನ ತಮ್ಮನ ಮಕ್ಕಳಾದ ದುರ್ಗಪ್ಪ, ಕರಿಯಪ್ಪ ತಂದೆ ಮಾಯಪ್ಪ ಮಾದರ ಇವರು ದಿನಾಂಕ 05.08.1978 ರಂದು ಡ ನಂ.1667 ಮಂಜೂರು ಮಾಡಿಸಿಕೊಂಡಿರುತ್ತಾರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಕೋರಿಕೆಯ ಮೆರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಅಸಲು ದಾವಾ ನಂ. 272 /2022
ಪಿ ಡಬ್ಲ್ಯು-1

ಓ.ಹೆ.ಕೆ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).